**PRAJAVANI (KANNADA DAILY)**

Date: Wednesday, February 12, 2014 | Page: 3

Edition: Mysore | Language: Kannada

ಗ್ಲೋಬಲ್ ರಿಸರ್ಚ್ ಅಲೈಯನ್ಸ್ ಅಧ್ಯಕ್ಷ ಮಶೆಲ್ಕರ್ ಅಭಿಮತ

# ‘ಸಾಮಾನ್ಯರಿಗೆ ತಲುಪುವ ಸೃಜನಶೀಲತೆಯೇ ಅಭಿವೃದ್ಧಿ’

**ಪ್ರಜಾವಾಣಿ ವಾರ್ತೆ**

ಮೈಸೂರು: ಸಮಾಜದ ಸಾಮಾನ್ಯ ವ್ಯಕ್ತಿಗೆ ಮುಟ್ಟದ ತಂತ್ರಜ್ಞಾನವು ನಿರರ್ಥಕ. ಅದನ್ನು ಬೆಳವಣಿಗೆ ಎನ್ನಲು ಸಾಧ್ಯವೇ ಇಲ್ಲ. ಒಂದು ಹೊಸ ಸಂಶೋಧನೆ, ತಾಂತ್ರಿಕ ಬೆಳವಣಿಗೆಯು ಕೆಳಮಧ್ಯಮ, ತಳ ಸಮುದಾಯಗಳಿಗೆ ಮುಟ್ಟಬೇಕು. ಆಗ ಮಾತ್ರ ಅಭಿವೃದ್ಧಿ ಸಾಧ್ಯ ಎಂದು ಗ್ಲೋಬಲ್ ರಿಸರ್ಚ್ ಅಲೈಯನ್ಸ್ ಅಧ್ಯಕ್ಷ ಡಾ.ಆರ್.ಎ. ಮಶೆಲ್ಕರ್ ಹೇಳಿದರು.

ಧರ್ಮಸ್ಥಳ ಮಂಜುನಾಥೇಶ್ವರ ವ್ಯವಸ್ಥಾಪನ ಅಭಿವೃದ್ಧಿ ಅಧ್ಯಯನ ಸಂಸ್ಥೆಯು (ಎಸ್‌ಡಿಎಂಐಎಂಡಿ) ಮಂಗಳವಾರ ಆಯೋಜಿಸಿದ್ದ ವರ್ಷಾಂತ್ಯದ ಉಪನ್ಯಾಸ ಮಾಲಿಕೆಯಲ್ಲಿ ನಾಯಕತ್ವ ಕುರಿತು ಮಾತನಾಡಿದರು.

‘ಅಗ್ಗವಾಗಿರುವ ಉತ್ಪನ್ನಗಳು ಹೆಚ್ಚು ಬಾಳಿಕೆ ಬರುವಂತದ್ದಲ್ಲ ಅಥವಾ ಗುಣಮಟ್ಟದ್ದಲ್ಲ ಎಂಬ ನಂಬಿಕೆ ತಪ್ಪು. ಇದಕ್ಕೆ ಸಾಕಷ್ಟು ಉದಾಹರಣೆಗಳನ್ನೂ ಕೊಡಬಹುದು. ಕಾಲು ಕಳೆದುಕೊಂಡವರಿಗೆ ಅಮೆರಿಕದಲ್ಲಿ ಕೃತಕ ಕಾಲುಗಳನ್ನು ತಯಾರಿಸಲಾಗಿದೆ. ಅದು ದುಬಾರಿ. ಆದರೆ, ಅವುಗಳ ಬಳಕೆ ನಿಯಮಿತವಾಗಿದೆ. ಆದರೆ, ಅದೇ ನಮ್ಮ ದೇಶದ ಜೈಪುರದಲ್ಲಿ ತಯಾರಾಗುವ ಕೃತಕ ಕಾಲುಗಳು ಕೇವಲ 28 ಡಾಲರ್‌ಗಳಿಗೆ (ಸುಮಾರು ₹1680) ಸಿಗುತ್ತವೆ. ಅಮೆರಿಕದಲ್ಲಿ ತಯಾರಾದ ಕೃತಕ ಕಾಲುಗಳಿಗಿಂತಲೂ ಇವು ಹೆಚ್ಚು ಬಾಳಿಕೆ ಬರುವಂತದ್ದು, ಒಳ್ಳೆಯ ಗುಣಮಟ್ಟದ್ದಾಗಿವೆ. ಅದನ್ನು ಬಳಸುವವರಿಗೆ ಯಾವುದೇ ಅಡ್ಡ ಪರಿಣಾಮವನ್ನುಂಟು ಮಾಡುವುದಿಲ್ಲ. ಇದು ಕೆಳಮಧ್ಯಮ ವರ್ಗದ ಜನರ ಕೈಗೆಟಕುವಂತಹದ್ದಾಗಿದೆ’ ಎಂದು ಕಾಲುಗಳ ಬಳಕೆಯ ಕುರಿತ ವಿಡಿಯೋ ತುಣುಕುಗಳನ್ನು ತೋರಿಸಿದರು.



ಮೈಸೂರಿನ ಧರ್ಮಸ್ಥಳ ಮಂಜುನಾಥೇಶ್ವರ ವ್ಯವಸ್ಥಾಪನ ಅಭಿವೃದ್ಧಿ ಅಧ್ಯಯನ ಸಂಸ್ಥೆಯು (ಎಸ್‌ಡಿಎಂಐಎಂಡಿ) ಮಂಗಳವಾರ ಆಯೋಜಿಸಿದ್ದ ವರ್ಷಾಂತ್ಯದ ಉಪನ್ಯಾಸ ಮಾಲಿಕೆಯಲ್ಲಿ ಗ್ಲೋಬಲ್ ರೀಸರ್ಚ್ ಅಲೈಯನ್ಸ್ ಅಧ್ಯಕ್ಷ ಡಾ.ಆರ್. ಎ. ಮಶೆಲ್ಕರ್ ಮಾತನಾಡಿದರು.

‘ಅತಿ ಸಾಮಾನ್ಯರಿಗೆ ಮುಟ್ಟುವಂತಹ ತಂತ್ರಜ್ಞಾನ ಮತ್ತು ವಿಜ್ಞಾನದ ಬೆಳವಣಿಗೆಗೆ ಚಿಂತನೆ ನಡೆಸುವುದೇ ಹೊಸ ಸಾಧನದ ಅವಿಷ್ಕಾರಕ್ಕೆ ದಾರಿಯಾಗುತ್ತದೆ. ಅದಕ್ಕೆ ಮೊಬೈಲ್ ಫೋನ್‌ಗಳು ಉತ್ತಮ ಉದಾಹರಣೆ ಯಾಗಿವೆ. ತರಕಾರಿ ಮಾರುವಂತಹ ಚಿಕ್ಕ ಉದ್ಯೋಗದಲ್ಲಿ ತೊಡಗಿ ರುವವರಿಂದ ದೊಡ್ಡ ಉದ್ಯಮಿಗಳು ತಮ್ಮ ವ್ಯಾವಹಾರಿಕ ವ್ಯಾಪ್ತಿಯನ್ನು ವಿಸ್ತರಿಸಲು ಇದು ಸಹಕಾರಿಯಾಗಿದೆ. ಅದಕ್ಕೆ ತಕ್ಕಂತೆ ಸೇವಾ ಯೋಜನೆಗಳೂ ಇರುವುದರಿಂದ ತಂತ್ರಜ್ಞಾನ ಬಳಕೆ ವ್ಯಾಪಕವಾಗಿ ಬೆಳೆಯಿತು. ಮೊಬೈಲ್ ತಂತ್ರಜ್ಞಾನವೂ ಅಗಾಧವಾಗಿ ಬೆಳೆಯುತ್ತಲೇ ಇದೆ’ ಎಂದರು.

‘ಕೇವಲ ತಂತ್ರಜ್ಞಾನ ಅಥವಾ ವಿಜ್ಞಾನದ ಮಟ್ಟಿಗೆ ಸೃಜನಾತ್ಮಕ ಅವಿಷ್ಕಾರಗಳು ನಡೆಯಬೇಕು ಅಂತಲ್ಲ. ಎಲ್ಲ ಕ್ಷೇತ್ರಗಳಲ್ಲಿಯೂ ಅಂತಹ ಪ್ರಯತ್ನಗಳಾಗಬೇಕು. ಪುಣೆಯ ಬಳಿಯ ಕುಗ್ರಾಮದಲ್ಲಿ ಮನೆಗೊಂದು ಶೌಚಾಲಯ ಯೋಜನೆಯು ಅನುಷ್ಠಾನಗೊಂಡರೂ ಊರಿನ ಮಂದಿ ಬಯಲಿಗೆ ಹೋಗುವುದು ನಿಲ್ಲಲಿಲ್ಲ. ಈ ಕುರಿತು ಸರ್ಕಾರೇತರ ಸಂಸ್ಥೆಯೊಂದು ನಡೆಸಿದ ಸಮೀಕ್ಷೆ ಆಸಕ್ತಿದಾಯಕ ವಾಗಿತ್ತು. ವಿಶೇಷವಾಗಿ ಸ್ತ್ರೀಯರು 5–6 ಜನರ ಗುಂಪು ಕಟ್ಟಿಕೊಂಡು ಬಯಲು ಶೌಚಾಲಯಕ್ಕೆ ಹೋಗುವ ರೂಢಿಯಿತ್ತು. ದಾರಿಯಲ್ಲಿ ಮತ್ತು ಬಯಲಿನಲ್ಲಿ ಪರಸ್ಪರ ಸಂಭಾಷಣೆ ಯಲ್ಲಿ ತೊಡಗುವುದೂ ಇತ್ತು. ಆದ್ದರಿಂದ ಅವರಿಗೆಲ್ಲ ತಮ್ಮ ಮನೆಗಳ ಲ್ಲಿಯೇ ಕಟ್ಟಿಕೊಟ್ಟ ಶೌಚಾಲಯಗಳ . ಬಳಕೆ ಉಚಿತವೆನಿಸಿರಲಿಲ್ಲ. ಇದನ್ನು ಮನಗಂಡ . ಸಂಸ್ಥೆಯು ಸಾಮೂಹಿಕ ವಾದ ಜಾಗದಲ್ಲಿ ಅರ್ಧಚಂದ್ರಾಕಾರ ದಲ್ಲಿ ಶೌಚಾಲಯ ಸಂಕೀರ್ಣ ನಿರ್ಮಿಸಿತು. ಪ್ರತಿಯೊಂದು ಶೌಚಾಲಯದ ಗೋಡೆಯ ಮೇಲೆ ಚಿಕ್ಕ ರಂಧ್ರಗಳನ್ನು ಮಾಡಿದರು. ಇದರಿಂದ ಅವರಿಗೆ ಪರಸ್ಪರ ಮಾತನಾಡಿ ಕೊಂಡಿರಲು ಅನುಕೂಲವಾಯಿತು. ಶೌಚಾಲಯಗಳ ಬಳಕೆಯೂ ರೂಢಿಯಾಯಿತು’ ಎಂದು ಅವರು ಹೇಳಿದರು.

‘ಜನಸಾಮಾನ್ಯರಿಗೆ ತಲುಪದ ತಂತ್ರಜ್ಞಾನವು ಹೆಚ್ಚು ಬೆಳೆಯುವುದಿಲ್ಲ. ಆ ದೇಶದ ಅಭಿವೃದ್ಧಿಯೂ ಆಗುವುದಿಲ್ಲ. ಇವತ್ತು ಚೀನಾ ದೇಶವೂ ಭಾರತೀಯರ ಸೃಜನಶೀಲತೆಯನ್ನು ನೋಡಿ ಕಲಿಯುತ್ತಿದೆ. ಬೇರೆ ದೇಶಗಳು ಎಷ್ಟೇ ಮುಂದುವರಿದರೂ ನಾವು ಸೃಜನಶೀಲರು ಎನ್ನುವುದು ನಿಸ್ಸಂಶಯ’ ಎಂದು ಹೇಳಿದರು.

ಎಸ್‌ಡಿಎಂಐಎಂಡಿ ನಿರ್ದೇಶಕ ಪರಶುರಾಮ್, ಕಾರ್ಯಕ್ರಮದ ಅಧ್ಯಕ್ಷೆ ನೀತೂ ಗಣಪತಿ ಹಾಜರಿದ್ದರು.